**P.W**-3

**ಈ ದಿನ ದಿನಾಂಕಃ 31.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರರಿಂದಃ**

ದಿನಾಂಕ 18.01.2023 ರಂದು ಪೋಲಿಸರು ಸಂಜೆ 7-00 ಗಂಟೆ ಸಮಯಕ್ಕೆ ಪೋನ್ ಮಾಡಿದ್ದರು. ಪೋಲಿಸರು ಬಟ್ಟೆಯನ್ನು ಅಮಾನತ್ತುಪಡಿಸಿಕೊಳ್ಳುವ ಸಲುವಾಗಿ ಪೋನ್ ಮಾಡಿದ್ದರು. ನಾನು ಠಾಣೆಗೆ ಹೋಗುವಷ್ಟರಲ್ಲಿ ಬಟ್ಟೆಗಳನೆಲ್ಲ ತಯಾರು ಮಾಡಿಟ್ಟಿದ್ದರು. ನಾನು ಹೋಗುವ ಪೂರ್ವದಲ್ಲಿ ಮಹಜರ್ ಹಾಗೂ ಚೀಟಿ ಬರೆವಣಿಗೆ ಮಾಡಿ ಇಟ್ಟಿರಲಿಲ್ಲ. ಬೇರೆ ಯಾವುದೇ ಪ್ರಕರಣದಲ್ಲಿ ಮಹಜರ್ ಸಾಕ್ಷಿದಾರರಾಗಿ ಸಹಿ ಮಾಡಿಲ್ಲ. ಸುಮಾರು 6 ಬಟ್ಟೆಗಳು ಇದ್ದವು. ನಾನು ಹೋಗುವಷ್ಟರಲ್ಲಿ ಪೋಲಿಸರು ಮಹಜರ್ ತಯಾರು ಮಾಡಿಟ್ಟಿದ್ದು, ಪೋಲಿಸರ ಕೋರಿಕೆಯ ಮೇರೆಗೆ ಮಹಜರ್ ಸಹಿ ಮಾಡಿರುತ್ತೇನೆ ಹಾಗೂ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ